# ಕರುಳ ಕಂದಮ್ಮನ ಹೊಸ ರೂಪಕ್ಕೆ ಹೆತ್ತವರು ಕಂಗಾಲು



ಅಧ್ಯಾಯ–2

ನಿವೇದಿತಾಳಿಗೂ ತಂದೆಯ ವರ್ತನೆ ಕಂಡು ಏನೋ ಅಸಹಜತೆಯ ಸುಳಿವು ದೊರಕಿತ್ತು. ತನ್ನೊಡನೆ ಏನೂ ಹೇಳದೇ ಪ್ರದೀಪ, ತನ್ನ ಹೆತ್ತವರನ್ನು ಕರೆಸಿ ಅವರೊಂದಿಗೆ ಗೌಪ್ಯವಾಗಿ ಮಾತನಾಡಿ ತನ್ನನ್ನು ಅವರೊಡನೆ ತವರಿಗೆ ಕಳಿಸಿ ತಾನು ಭೂಗತನಾಗಿದ್ದಾನೆ! ಏನಿದೆ ಅವನ ಉದ್ದೇಶ? ಯಾಕೆ ಹೀಗೆ ಮಾಡಿದ? ಅವಳಿಗೆ ದುಃಖ ಒತ್ತರಿಸಿ ಬಂದು ಅಳಲು ಶುರು ಮಾಡಿದಳು. ಸ್ವತಃ ಭೂಮಿಗಿಳಿದು ಹೋದವರಂತಾಗಿದ್ದ ಕೇಶವ ಮತ್ತು ವೀಣಾರಿಗೆ ಅವಳನ್ನು ಸಂತೈಸುವ ಶಕ್ತಿಯೇ ಉಳಿದಿರಲಿಲ್ಲ. ಸತ್ಯ ಎಷ್ಟು ದಿನವೆಂದು ಮುಚ್ಚಿಡಲು ಸಾಧ್ಯವಿತ್ತು? ಅವಳು ಅದನ್ನು ಎದುರಿಸಿ ಅರಗಿಸಿಕೊಳ್ಳುವ ಮನಸ್ಥೈರ್ಯ ಬೆಳೆಸಿಕೊಳ್ಳಲೇಬೇಕು ಎಂದು ಅವರೂ ಏನೂ ಮಾತನಾಡದೇ ಮೌನ ವಹಿಸಿದರು.

'ನಿಮ್ಮನ್ನು ಕರೆಸಿ ಅವ್ರು ಏನು ಹೇಳಿದ್ರಪ್ಪ? ಅದನ್ನಾದರೂ ಹೇಳಿ... ಆಗ ಅವರ ಮನದಲ್ಲೇನಿದೆ ಎಂದು ನನಗೆ ತಿಳಿಯುತ್ತೆ... ನನ್ಹತ್ರ ಮುಚ್ಚಿಡುವಂಥದ್ದೇನಿದೆ?'. ಕೇಶವರ ಮುಖ ಅರಕ್ತವಾಯಿತು. ಹೇಗೆ ಹೇಳಲಿ... ಏನೆಂದು ಹೇಳಲಿ? ನೀನು ನಿನ್ನ ನಿಧೀನ್ನ ಕೊಲ್ಲಲು ಯತ್ನಿಸಿದೆಯಂತೆ ಎಂದರೆ ನಿನಗೆ ಹೇಗಾಗಬೇಡಾ? ಆ ಆರೋಪ ಎದುರಿಸುವ ಸ್ಥೈರ್ಯ ನಿನ್ನಲ್ಲಿದೆಯೇ? ಇಲ್ಲ... ಖಂಡಿತಾ ಇಲ್ಲ... ನೀನು ಒಂದು ದಿನವೂ ದನಿಯೆತ್ತರಿಸಿ ಮಾತನಾಡಿದವಳಲ್ಲ... ಬಲು ಸೂಕ್ಷ್ಮ ಮನಸ್ಥಿತಿಯ ಕಂದ ನೀನು... ಸಣ್ಣ ವಿಚಾರಕ್ಕೂ ಮನಸ್ಸಿಗೆ ನೋವಾದರೆ ಕೂಡಲೇ ನಿನ್ನ ಕಂಗಳು ತುಂಬಿ ಬರುತ್ತಿದ್ದವು. ಇನ್ನು ಇಂಥ ಅಪವಾದ, ಅದೂ ನಿನ್ನ ಕೈ ಹಿಡಿದ ಪತಿಯಿಂದಲೇ ಬಂದರೆ ಹೇಗೆ ಭರಿಸಬಲ್ಲೆ ಹೇಳು? ಮದುವೆಯ ನಂತರ ಅವನೇ ನಿನ್ನ ಸರ್ವಸ್ವವಾಗಿದ್ದ... ನೀನು ನೆಲದ ಮೇಲೆ ಕಾಲಿಟ್ಟರೆ ಸವೆಯುವೆ ಎನ್ನುವಷ್ಟು ಮುಚ್ಚಟೆಯಿಂದ ನೋಡಿಕೊಳ್ಳುತ್ತಿದ್ದ. ನಿನ್ನ ಆನಂದದ ಸಂಸಾರಕ್ಕೆ ಯಾರ ಕಣ್ಣೂ ತಗುಲದಿರಲಿ ಎಂದೇ ನಮ್ಮ ಹಾರೈಕೆಯಾಗಿತ್ತು. ನಿನ್ನ ಜೀವನ ಜೇನು ಬೆರೆತ ಹಾಲಿನಂತೆ ಸುಮಧುರವಾಗಿದೆ ಎಂಬ ಸಂತೋಷವೊಂದೇ ಈ ಹೆತ್ತವರಿಗೆ ನೆಮ್ಮದಿಯಾಗಿತ್ತು. ದೊಡ್ಡ ಗಾತ್ರದಲ್ಲಿ ಗ್ರಾನೈಟ್ ಉದ್ದಿಮೆ ನಡೆಸುತ್ತಿದ್ದ ಪ್ರದೀಪ ನಿನ್ನನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಿದ್ದ. ಎಷ್ಟೇ ದೊಡ್ಡ ಉದ್ದಿಮೆಯಾದರೂ ಮೊದಲ ಪ್ರಾಶಸ್ತ್ಯ ಮನೆಗೆ, ಮಡದಿಗೆ. ಪರವೂರಿಗೆ, ಪರದೇಶಕ್ಕೆ ಹೋಗುವಾಗ ನಿನ್ನನ್ನು ತಪ್ಪದೇ ಕರೆದೊಯ್ಯುತ್ತಿದ್ದ. ನೀನು ಗರ್ಭಿಣಿ ಎಂದು ತಿಳಿದ ಮೇಲಂತೂ ತನ್ನ ಪ್ರತಿರೂಪ ಹೊತ್ತಿದ್ದಾಳೆಂದು ಅಂಗೈಯಲ್ಲಿಟ್ಟುಕೊಂಡು ಜೋಪಾನ ಮಾಡಿದ್ದ. ಅವನ ಒಲವಿನ ಮಹಾಪೂರಕ್ಕೆ ನೀನು ಕರಗಿಹೋಗಿದ್ದೆ. ನಮ್ಮನ್ನೂ ಮರೆತಿದ್ದೆ. ಅವನಿಚ್ಛೆಯಂತೆ ಹೆಣ್ಣು ಮಗುವಾದಾಗಲಂತೂ ಪ್ರದೀಪ ಹಬ್ಬ ಆಚರಿಸಿದ್ದ. ತನ್ನ ಬಾಳಿಗೆ ನಿಧಿ ಸಿಕ್ಕಿತೆಂದು ಅದೇ ಹೆಸರನ್ನು ಮಗಳಿಗಿಟ್ಟಿದ್ದ.

ಘಟನೆಗಳೆಲ್ಲವೂ ರೀಲಿನಂತೆ ಕೇಶವರ ಕಣ್ಮುಂದೆ ಹಾದುಹೋದವು. ಇನ್ನು ಲೆಕ್ಕ ತಪ್ಪಿದ್ದೆಲ್ಲಿ? ಯಾಕೆ ಹೀಗಾಯಿತು? ಪ್ರದೀಪನನ್ನು ಎಲ್ಲಿ ಹುಡುಕುವುದು? ವಿದೇಶಕ್ಕೆ ಹೋಗಿ ಕುಳಿತರೆ ಗತಿ ಏನು..? ಇಲ್ಲಿ ಮಗಳ ಪಾಡೇನು? ಅವಳಿಗೇನು ಉತ್ತರ ಕೊಡುವುದು? ಚಿಂತೆಯ ಕಣಿವೆಯೊಳಗೆ ಬಿದ್ದು ಹೊರಳಾಡುತ್ತಿದ್ದ ಅವರನ್ನು ಮಗಳ ದನಿ ಎಚ್ಚರಿಸಿತು, 'ಹೇಳಪ್ಪಾ... ಅವ್ರು ನಿನ್ನೆ ಏನು ಹೇಳಿದ್ರು? ಅವ್ರೆಲ್ಲಿಗೆ ಹೋಗಿದ್ದಾರೆ..?'

'ಒಂದ್ವಾರ ಊರಲ್ಲಿಲ್ವಂತೆ... ಬರುವ ತನಕ ಇಲ್ಲೇ ಇರು ನೀನು... ಆಯ್ತಾ... ಚಿಂತೆ ಮಾಡಬೇಡಾ...'